Calling Attention to a Matter of Urgent Pubiic Importance *re*: breakage of sluice of Sira Doddakere

Sri BOLA RAGHURAM SHETTY (Karkal).—I call the attention of the Minister of State for Minor Irrigation to the breakage of sluice of Sira Doddakere.

† **Smt. BASAVARAJESWARI** (Deputy Minister for Social Welfare).—Sira Doddakere is a major tank bearing Register No. 2 and Sl. No. 152, and has got a total atchkat of 844 acres and 32 guntas (633 acres 1 gunta of wet and 211 acres 31 gnntas of garden). The tank has got only one masonry wasteweir and the same is in good condition. This tank has got in all three sluices. The front cistern of the left sluice being in a dilapidated condition required some urgent repairs. Hence, an estimate for Rs. 1,200 for reconstruction of this cistern was sanctioned by the Executive Engineer, Madhugiri Division, and the work was to be taken up for execution. Meanwhile the front slab of the cistern was damaged by some of the ryots in order to draw water from the tank at a level lower than cill level of the plug sluice. As a result of this, there was some leakage from the sluice when the tank received water due to rains on the night of 24th August 1969. On receipt of this information immediate action was taken by the Executive Engineer to prevent leakage of water through the sluice by replacing the broken front slab of the cistern of the sluice. Action was also taken to block the leakage by putting puddle and sand bags. It is reported that the leakage was stopped and at present there is no wastage of water through the sluice. The tank has now received water during the recent rains, hence the proposed reconstruction of front cistern of the sluice cannot be taken up now. However, the Executive Engineer has taken necessary action to get repairs done to the sluice immediately the water level in the tank were to go down.

ಶ್ರೀ ಬೋಳಾ ರಘುರಾಮ ಶೆಟ್ಟಿ.—ಈ ಕೆರೆಯ ಸ್ಲೂಯಿಸ್ ಒಡೆದು ಸುಮಾರು ಐದು ತಿಂಗಳಾದವು. ಈ ಸಂದರ್ಭದಲ್ಲಿ ಪಿ.ಡಬ್ಲ್ಯು.ಡಿ. ಇಂಜನೀಯರವರು ನೀರು ಹೋಗಲು ಸ್ಲೂಯಿಸ್‌ನ್ನು ಓಪನ್ ಮಾಡಿದರು ಇದರಿಂದ ರೈತರು ನೀರಾವರಿಗೆ ಉಪಯೋಗ ಮಾಡಲೂ ಆಗಲಿಲ್ಲ ಮತ್ತು ಸುಮಾರು 250 ಎಕರೆ ಸಾಗುವಳಿಯಾಗುವುದೂ ಹೋಯಿತು. ಆದುದರಿಂದ ಇದರ ಬಗ್ಗೆ ಅಕ್ರಮವಾಗಿ ಕೆಲಸ ಮಾಡಿದ ಅಧಿಕಾರಿಗಳಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಮತ್ತು ಇದನ್ನು ಸರಿ ಮಾಡಲು ಇನ್ನೆಷ್ಟು ಕಾಲ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ಬಸವರಾಜೇಶ್ವರಿ.—ನೀರು ಹೆಚ್ಚಾಗಿ ಬಂತು ಎಂದು ಇಲ್ಲಿ ಮೊದಲು ಸ್ಲೂಯಿಸ್‌ನ್ನು ಒಡೆಯಲು ಅಧಿಕಾರಿಗಳು ಅವಕಾಶ ಕೊಟ್ಟಿದ್ದರು. ಆದರೆ ಕೆರೆ ನೀರು ತುಂಬಿದ ಕೂಡಲೇ ಇದರಲ್ಲಿ ಲೀಕೇಜು ಇರುವುದು ಗೊತ್ತಾಯಿತು. ಆದರೆ ಇಲ್ಲಿನ ಅಸಿಸ್ಟೆಂಟು ಇಂಜನೀಯರು ಬಹಳ ತೀವ್ರಗತಿಯಿಂದ ತಕ್ಕ ಕೆಲಸ ಮಾಡದೇ ಇದ್ದುದರಿಂದ ಇಲ್ಲಿಯ ನೀರನ್ನು ಸರಿಯಾಗಿ ಉಳಿಸಲಾಗಲಿಲ್ಲ. ಆದರೆ ಇಲ್ಲಿರುವ ಎಕ್ಸಿಕ್ಯೂಟೀವ್ ಇಂಜನೀಯರು ಬೇಗನೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ ಸ್ಯಾಂಡ್ ಬಾಗ್ಸ್ ತಂದು ಹಾಕಿದ್ದಾರೆ ಮತ್ತು ಲೀಕೇಜುಗಳನ್ನು ದುರಸ್ತು ಮಾಡಿದ್ದಾರೆ. ಇದರ ಬಗ್ಗೆ ಒಂದು ಅಂದಾಜು ಮತ್ತು ಎಕ್ಸ್‌ಪರ್ಟ್ ರಿಪೋರ್ಟ್ ಇವೆರ್ನಾ ಬರುವುದರಲ್ಲಿದೆ. ಕೆರೆಯ ನೀರು ಕಡಿಮೆಯಾದಮೇಲೆ ಇಲ್ಲಿ ನೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

1924-Agreement between Mysore and Tamil Nadu *re* : Cauvery Waters

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಈ ದೇಶದಲ್ಲಿ ಬಹಳ ಪ್ರಾಮುಖ್ಯವಾದ ಮತ್ತು ಅತಿ ಜರೂರಾದ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅದು ಮೈಸೂರು ಹಾಗೂ ಮದ್ರಾಸ್ ಸರ್ಕಾರಕ್ಕೆ ಆಗಿರುವ ಕಾವೇರಿ ನದಿ ನೀರಿನ ಒಪ್ಪಂದ. ಈ ಒಪ್ಪಂದ 1974ನೇ ಇಸವಿಯಲ್ಲಿ ಮುಗಿಯುತ್ತದೆ. ಇದು ಮುಗಿಯುವುದರೊಳಗಾಗಿ ಕಾವೇರಿ ನದಿ ನೀರಿನ ಎಲ್ಲಾ ನೀರಾವರಿ ಯೋಜನೆಗಳನ್ನೂ ಅತಿ ಜರೂರಾಗಿ ತೆಗೆದುಕೊಂಡು ಅವನ್ನು ಪೂರ್ತಿಕೆ ಮಾಡುವ ಕೆಲಸವನ್ನು ಸರಕಾರ ಮಾಡಬೇಕು ಎಂದು ನಾವು ಇಲ್ಲಿ ಆಗಿಂದಾಗ್ಗೆ ನಿರ್ಣಯಗಳ ಮೂಲಕ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಸರ್ಕಾರದಮೇಲೆ ಒತ್ತಾಯ ತರುತ್ತಿದ್ದೇವೆ. 1974ನೇ ಇಸವಿ ಎನ್ನುವುದು ಬಹಳ ಸಮೀಪದಲ್ಲಿದೆ. ಆದುದರಿಂದ ಸರ್ಕಾರ ಇದುವರೆಗೆ ತೆಗೆದುಕೊಂಡಿರುವ ಕಾರ್ಯ ಎಷ್ಟುಮಟ್ಟಿಗೆ ಸಫಲವಾಗಿದೆ ಎನ್ನುವುದು ನಮಗೆ ಗೊತ್ತಿಲ್ಲ. ಇಂದು ಬೆಳಗ್ಗೆ ಪ್ರಶ್ನೋತ್ತರದ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಅವರು ಕೂಡ ಇದರ ಬಗ್ಗೆ ನಿಧಾನವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಇಷ್ಟು ತಡವಾಗಲು ಅನೇಕ ಕಾರಣಗಳಿವೆ ಎಂದು ಅವರೇ ಒಪ್ಪಿಕೊಂಡರು. 1974ನೇ ಇಸವಿ ಎನ್ನುವುದು ಬಹು ಸಮೀಪವಾಗಿದೆ. ಆದುದರಿಂದ ಕಾವೇರಿ ನದಿ ಯೋಜನೆಗಳನ್ನು ಸಂಪೂರ್ಣವಾಗಿ ಪೂರ್ತಿಕೆ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡರೂ ಅದನ್ನು ನಾವು ಒಪ್ಪುತ್ತೇವೆ. ಇದನ್ನು ಮಾಡದೇ ಹೋದರೆ ನಮ್ಮ ಮುಂದಿನ ಪೀಳಿಗೆಯ ಜನತೆ ಒಂದು ಶಾಪಕ್ಕೆ ನಾವು ಗುರಿಯಾಗಬೇಕಾಗುತ್ತದೆ. ಆದುದರಿಂದ ಕಾವೇರಿ ನದಿ ನೀರಿನ ಎಲ್ಲಾ ಯೋಜನೆಗಳನ್ನೂ ಜರೂರಾಗಿ ಮಾಡಲು ತಮಗೆ ಬಲಬೇಕಾದರೆ ನಾವು ಕೊಡುತ್ತೇವೆ. ತಕ್ಷಣ ಯಾವ ಯಾವ ಕೆಲಸಗಳು ಪೂರ್ತಿಯಾಗಬೇಕು ಅವನ್ನು ಸರ್ಕಾರ ಮಾಡುತ್ತದೆ ಎನ್ನುವ ಪೂರ್ಣ ಆಶ್ವಾಸನೆಯನ್ನು ಕೊಡಬೇಕು ಎಂದು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಸಭೆಯಲ್ಲ ನಾವೆಲ್ಲರೂ ಒಂದಾಗಿ ತಮಗೆ ಏನು ಸಹಾಯಬೇಕಾದರೂ ಕೊಡಲು ಸಿದ್ಧರಿದ್ದೇವೆ. ಇದರ ಬಗ್ಗೆ ಒಂದು ನಿರ್ಣಯ ಬೇಕಾದರೂ ತಂದು ತಮಗೆ ಬಲವನ್ನು ಕೊಡ ಬಹುದು ಮತ್ತು ತಮ್ಮ ಶಕ್ತಿಯನ್ನು ತುಂಬಲಕ್ಕೆ ಏನು ಬೇಕಾದರೂ ಮಾಡುತ್ತೇವೆ. ಬೇಗನೆ ಇವು ಕಾರ್ಯಗತವಾಗುವಂತೆ ಮಾಡಬೇಕು ಇದರ ಬಗ್ಗೆ ನಾವು ಹೆಚ್ಚು ಮಾತನಾಡಬೇಕೆಂದೇನಿಲ್ಲ. ಮತ್ತು ರಿಸೋರ್ಸಸ್ ಕಮಿಟಿ ರಿಪೋರ್ಟ್ ಬರಲಿ ನಮಗೆ ಎಷ್ಟು ಹಣ ಬರುತ್ತದೋ ಅದನ್ನು ನೋಡಿ ಮಾಡೋಣ ಎನ್ನಬಹುದು. ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ ರಿಸೋರ್ಸಸ್ ಕಮಿಟಿಯಲ್ಲಿ ನಾನು ಮೆಂಬರ್ ಆಗಿದ್ದೇನೆ. ರಿಸೋರ್ಸ್ ಕಮಿಟಿಮೇಲೆ ಕಾರಣ ಹೇಳಿ ಜಾರಿಕೊಳ್ಳುವ ನೀತಿ ಸರಿಯಲ್ಲ. ರಿಸೋರ್ಸಸ್ ಕಮಿಟಿಯವರು ಫೈನಾನ್ಸ್ ಕಮೀಷನ್ ಬರುತ್ತದೆ ಎಂದು ನಮ್ಮ ದಾಯಿಗೆ ಬೇಗ ಹಾಕಿದರು. ಫೈನಾನ್ಸ್ ಕಮೀಷನ್ ವರದಿ ಬಂದದ್ದು ಕೂಡ ಆಯಿತು. ಅದರಲ್ಲೂ ಕೂಡ ಏನಾಗಿದೆ ಎಂದು ಗೊತ್ತಾಗಿದೆ. ಆದುದರಿಂದ ನಾನು ಹೇಳುವುದು ಫೈನಾನ್ಸ್ ಕಮೀಷನ್ ರಿಪೋರ್ಟ್ ಯಾವ ರೀತಿಯೇ ಬರಲಿ, ಈಗ ಎಕ್ಸ್ಟ್ರಾಜಿನ ಹರಾಜಿನಿಂದ ಬರುವ ಹಣ 8½ ಕೋಟಿ ರೂಪಾಯಿಯನ್ನು ಪ್ರತ್ಯೇಕವಾಗಿ ನೀರಾವರಿ ಯೋಜನೆಗೆ ತೆಗೆದಿಡಿ. ಅನಂತರ ಬೇರಾವಣೆ ಮಾಡೋಣ. ನಮ್ಮಲ್ಲಿ ಏನು ರಿಸೋರ್ಸಸ್ ಬೇಕೋ ಅದನ್ನು ಕೊಡುತ್ತೇವೆ, ಈಗ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಕಾರ್ಯಗತ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸಭೆಗೆ ಜವಾಬ್ದಾರಿಯಾವ ಮುಖ್ಯಮಂತ್ರಿಗಳು ಕೊಡಬೇಕು. ಅವರು ಖರಾರುವಾಕ್ಕಾದ ಆಶ್ವಾಸನೆ ಕೊಟ್ಟರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಆದುದರಿಂದ ಈ ಕೆಲಸದಲ್ಲಿ ಮುಖ್ಯಮಂತ್ರಿಗಳು ಏನು ಮಾಡುತ್ತಾರೆಂಬುದನ್ನು ತಿಳಿಸಬೇಕು ಮತ್ತು ಈ ಬಗ್ಗೆ ಆಶ್ವಾಸನೆ ಕೊಡಬೇಕೆಂದು ತಮಗೆ ಈ ಸೂಚನೆ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಹೆಚ್. ಸಿದ್ದವೀರಪ್ಪ (ಹರಿಹರ).—ಈಗ ಈ ಅಧಿವೇಶನ ಪ್ರಾರಂಭವಾದ ಲಾಗಾಯಿತು ಈ ವಿಷಯದಲ್ಲಿ ಅಲ್ಲಿ ಇಲ್ಲಿ ಗುಸುಗುಸು ಮಾತುಕತೆ ನಡೆಯುತ್ತಾ ಇರುವುದರಿಂದ ಈ ಮಾತನ್ನು ಹೇಳಬೇಕಾಗಿದೆ. ಸರ್ಕಾರದ ಹಿತದೃಷ್ಟಿಯಿಂದಲೂ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದಲೂ ಈ ಮಾತನ್ನು ಹೇಳುತ್ತಿದ್ದೇನೆ. ತಾವು ಇದನ್ನು ನಂಬಬೇಕು. ಈಗಾಗಲೇ ಎಲ್ಲಾ ಕಡೆಯೂ ಕಾವೇರಿ ನದಿಯ ವಿಚಾರದಲ್ಲಿ ನಮ್ಮ ದೇಶದಲ್ಲಿ ಹಾಹಾಕಾರ ಹೊರಟಿದೆ. ನನಗೆ ಗೊತ್ತಿರುವ ಹಾಗೆ ಕಾವೇರಿ ಡೆಲ್ಟಾ ಏರಿಯಾ ಕೆಳಗೆ ಬರತಕ್ಕಂಥ ಸುಮಾರು 5 ತಾಲ್ಲೂಕಿನ ಪೈಜೆಗಳು ಹಿಂದೆ

ಮೈಸೂರು ದೇಶದಲ್ಲಿ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಸದಸ್ಯರಾಗಿದ್ದಂಥ ಶ್ರೀಮಾನ್ ನಂಜರಾಜ ಅರಸ್‌ರವರ ನೇತೃತ್ವದಲ್ಲಿ ಇದನ್ನು ಕಾರ್ಯಗತ ಮಾಡಿಕೊಡಿ ಎಂದು ಮನವಿ ಕೊಟ್ಟಿದ್ದರು ಮತ್ತು ಸರ್ಕಾರದಲ್ಲೂ ಸಹ ಡಿಪ್ಯೂಟೇಷನ್ ಹೋಗಿದ್ದರು ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಈಗ ದೇಶದಲ್ಲಿ ಬಹಳ ತೊಂದರೆ ಇದೆ. ಅದಕ್ಕೆ ಏನು ಬೇಕಾದರೂ ತ್ಯಾಗ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ನಿಮಗೆ ಹೋದ ಬಡ್ಜೆಟ್ಟಿನಲ್ಲಿ ಇದ್ದಂಥ ಕಾತುರತೆ ಈಗ ಇದ್ದಹಾಗೆ ನನಗೆ ಭಾಸವಾಗುವುದಿಲ್ಲ. ಕಾರಣ ಹೋದ ಅಧಿವೇಶನದಲ್ಲಿ ಈ ವಿಚಾರದಲ್ಲಿ ಸರ್ಕಾರದವರೂ ಮತ್ತು ವಿರೋಧಪಕ್ಷದವರೂ ಬೇರೆ ಬೇರೆ ಭಿನ್ನಾಭಿಪ್ರಾಯ ತೋರಿಸಲಿಲ್ಲ. ಈಗ ಸರ್ಕಾರದವರಿಗೆ ಅಸಕ್ತಿ ಕಡಿಮೆಯಾದ್ದರಿಂದ ನಾನಾದರೂ ಹೇಳುತ್ತೇನೆ. ನಾವು ಇಲ್ಲಿಗೆ ಬಂದಿರತಕ್ಕದ್ದು ಕೇವಲ ಸರ್ಕಾರವನ್ನು ವಿರೋಧ ಮಾಡುವುದಕ್ಕಲ್ಲ. ಅದಷ್ಟುಮಟ್ಟಿಗೆ ಸರ್ಕಾರಕ್ಕೆ ಒಳ್ಳೆಯ ಕಲಸದಲ್ಲಿ ಬೆಂಬಲ ಕೊಡಬೇಕು ಎನ್ನುವ ದೃಷ್ಟಿಯಿಂದ ಬಂದಿದ್ದೇವೆ. ನೀವು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎನ್ನುವ ಆಶ್ವಾಸನೆ ಕೊಡಬೇಕು. ಈಗ ನಿಮ್ಮ ಭಾಷಣಗಳನ್ನು ನೋಡಿದರೆ ಮಂಕಾಗುತ್ತದೆ. ಏತಕ್ಕೆಂದರೆ 1924ರ ಅಗ್ರಿಮೆಂಟ್ ಪ್ರಕಾರ 1974ನೇ ಇಸವಿಯೊಳಗೆ ಕಾವೇರಿ ನದಿ ನೀರಿನಲ್ಲಿ 45 ಟಿ.ಎಂ.ಸಿ. ಎಫ್.ಟಿ. ಅಷ್ಟು ನೀರನ್ನು ಉಪಯೋಗಿಸಿಕೊಳ್ಳುವ ಹಕ್ಕು ಇದೆ. ಅದನ್ನು ಉಪಯೋಗಿಸಿಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ನಿಮ್ಮ ಮೇಲೆ ನಂಬಿಕೆ ಇದೆ, ನಿಜವಾಗಲೂ ನಂಬಿದ್ದೇವೆ. ಅದು ಏನೇ ಇರಲಿ 1924ರ ಒಪ್ಪಂದ ಮುಖ್ಯವಲ್ಲ ಅದನ್ನು ಯಾವಾಗ ಬೇಕಾದರೂ ಮಾಡಿಕೊಳ್ಳಬಹುದು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ ಅದನ್ನಾದರೂ ತೀವ್ರವಾಗಿ ತಿಳಿಸಿಬಿಡಿ. ಇದನ್ನು 1974ನೇ ಇಸವಿ ಪೂರೈಸುವುದರೊಳಗೆ ಪೂರೈಸುತ್ತೇವೆ ಎಂದು ನೀವು ಹಿಂದು ಕಮಿಟಿ ಮಾಡಿದಿರಿ. ಆ ರಿಸೋರ್ಸಸ್ ಕಮಿಟಿಯಲ್ಲಿ ನಾವು ಕೇಳಿದೆವು, ಅಪರೂ ಮಾಡುತ್ತೇವೆ ಎಂದು ಹೇಳಿದರು, ಅದಕ್ಕೆ ನಾವು ಒಪ್ಪಿಕೊಂಡಿವಿ. ಆಮೇಲೆ ನಾನೇ ಆ ಕಮಿಟಿಯಲ್ಲಿ ಸಲಹೆ ಕೊಟ್ಟೆ. ಏನೆಂದರೆ ಹೇಗೂ ಜುಲೈ ತಿಂಗಳಿನಲ್ಲಿ ಫೈನಾನ್ಸ್ ಕಮೀಷನ್‌ನವರು ರಿಪೋರ್ಟ್ ಕೊಡುತ್ತಾರೆ. ಅದರಲ್ಲಿ ಏನಾದರೂ ಅನುಕೂಲವಾಗಬಹುದು ಎಂದು ಹೇಳಿದನೆ ಹೊರತು ಬೇರೆ ಯಾವ ಉದ್ದೇಶದಿಂದಲೂ ಹೇಳಿಲ್ಲ. ಅದೂ ಕೂಡ ಬಯಲಿಗೆ ಬಂದಿದೆ. ಆದರಿಂದ ಒಳ್ಳೆಯ ಪ್ರಯೋಜನವಾಗುವುದಿಲ್ಲ.

ಈಗೆಷ್ಟು ಫೈನಾನ್ಸ್ ಕಮಿಷನ್ನಿನಿಂದ ಅನ್ಯಾಯವಾಗಿದೆ ಎಂಬ ಬಗ್ಗೆ ಮಂತ್ರಿಗಳು ಒಂದು ಹೊತ್ತಿಗೆಯನ್ನು ಕೊಟ್ಟಿದ್ದಾರೆ, ಮುಖ್ಯಮಂತ್ರಿಗಳು ದೆಹಲಗೆ ಹೋಗಿಬಂದರು, ಕೇಂದ್ರ ಸರಕಾರವೇನು ಮಾಡುವುದು, ಪ್ರಧಾನಿಯವರೇನು ಆಶ್ವಾಸನೆ ಕೊಟ್ಟಿದ್ದಾರೆ ಎಂದು ಹೇಳಿದರೆ ಒಳ್ಳೆಯದು. ಬರೀ ಮಾತಿನಿಂದ ಮತ್ತು ಇಲ್ಲಿ ಚರ್ಚೆ ಮಾಡುವುದರಿಂದೇನೂ ಪ್ರಯೋಜನವಾಗುವುದಿಲ್ಲ. 1974ರೊಳಗಾಗಿ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಬೇಕು. ಕೃಷ್ಣ ನೀರನ್ನು ಉಪಯೋಗಿಸಿಕೊಳ್ಳಲು ಕಾರ್ಯಕ್ರಮವಿದೆ, ಕಾವೇರಿ ಮತ್ತು ಕೃಷ್ಣ ಎರಡೂ ಮುಖ್ಯ. ಆದರೆ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಲು ಅತುರವಿರುವುದು, 1974ರೊಳಗಾಗಿ ಉಪಯೋಗಿಸಿಕೊಳ್ಳದಿದ್ದರೆ ನಮ್ಮ ಹಕ್ಕು ಹೋಗುವುದು ಎಂಬ ಭಯ, ಭೀತಿ, ಸಂದೇಹ ಇವೆ. ಅದಕ್ಕಾಗಿ ಸರಕಾರದವರು ಬೇರೆ ರೀತಿಯಿಂದ ಯೋಚನೆ ಮಾಡದೆ 1974ರೊಳಗಾಗಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ, ಅದಕ್ಕೆ ಪೂರ್ವಭಾವಿಯಾಗಿ ಈ ವರ್ಷ ಇಷ್ಟು ಕೋಟಿ ಖರ್ಚು ಮಾಡುತ್ತೇವೆ ಎಂಬ ಭರವಸೆ ಕೊಡಬೇಕು. ಹಣ ಹೇಗೆ ಬರಬೇಕೆಂಬುದು ಗೊತ್ತಿದೆ, ಹಣಕಾಸಿನ ಮಂತ್ರಿಗಳನ್ನು ಕೇಳಿದರೆ ಸಲಹೆ ಕೊಡುವರು. ಜನರ ಮನಸ್ಸಿನಲ್ಲಿ ನಮನ್ಯಗಳು ಬಹಳವಾಗಿವೆ, ಅಭಿಪ್ರಾಯ ಬೇರೆಬೇರೆ ಕವಲಾಗಿ ಒಡೆಯಬಾರದು. ಈ ಪಕ್ಷ ಆ ಪಕ್ಷ ಎಂದು ಭೇದ ಮಾಡದೆ ಎರಡೂ ಕಡೆ ಕಾವೇರಿ ನೀರಿಗಾಗಿ ಹೋರಾಡುತ್ತಿರುವವರಿರುವುದರಿಂದ ಜಾಗ್ರತೆ ಸೂಕ್ಷ್ಮ ಕ್ರಮ ಕೈಕೊಳ್ಳಬೇಕಾದ್ದು ಅವಶ್ಯಕ. ಈಗ ಸುಮ್ಮನೆ ಹಬೆ ಇದೆ, ಬೆಂಕಿ ಕಾಣುತ್ತಿಲ್ಲ, ಹೊಗೆ ಬೇಕಾದಷ್ಟಿದೆ, ಅದನ್ನು ದೂರಮಾಡಬೇಕು. ಇವನ್ನೆಲ್ಲಾ ಗಮನಿಸಿ ತೆರೆದ ಮನಸ್ಸಿನಿಂದ ಒಂದು ಸರಿಯಾದ ಹೇಳಿಕೆ ಕೊಡಬೇಕು, ತೃಪ್ತಿಕರವಾದ ಹೇಳಿಕೆ ಕೊಡಬೇಕು, ಕಾವೇರಿ ಬೇಸಿನ್‌ನಲ್ಲಿ ಪ್ರಾಮುಖ್ಯವಾಗಿರುವ 4 ಪ್ರಾಜೆಕ್ಟುಗಳಿಗೆ ಕನಿಷ್ಠಪಕ್ಷ 10 ಕೋಟಿ ರೂಪಾಯಿಗಳನ್ನಾದರೂ ಖರ್ಚುಮಾಡುತ್ತೇವೆ ಎಂದು ಹೇಳಬೇಕು. ಹಾಗೆ ಸ್ಪಷ್ಟಪಡಿಸಿದರೆ ಜನರು ಸರಕಾರವನ್ನು ಅಭಿನಂದಿಸುತ್ತಾರೆ ಮತ್ತು ಎಲ್ಲರ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ ಎಂದು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

Mr. SPEAKER.—Now on the points raised by Hon'ble Members Sivappa and Siddaveerappa, we have to see whether there is any scope for discussion. The matter is not actually under discussion. The point is, whether it is possible to allow some time for it, and if so, what

(MR. SPEAKER)

should be done? Members know that at the request of the Hon'ble Leader of the Opposition, I called upon the Hon'ble Leaders of parties to come together; secondly a number of Hon'ble Members on both the sides had met in my me chamber. Hon'ole Members Sriyuths S. Sivappa, Gopal Gowda, and Hutchmasti Gowda discussed this question with the Hon'ble Minister for Parliamentary Affairs; later on, the Hon'ble Chief Minister also joined us. I found that there was almost a sort of agreement between Leaders of parties on both the sides. If the House so desires, I shall once again call members on both sides to come together and if they come to some settlement or agreement the matter may be dealt with accordingly.

As far as the notice of motion given by Sri Nanje Gowda is concerned, I had to disallow it on the ground that the matter was not of recent occurrence. Hon'ble Members have expressed doubt about it. I shall peruse the records and give a finding about it.

They only motion before me is, the notice of motion given by Sri H. M. Channabasappa. I have not given a ruling on it. I shall call upon the representatives of both sides to come together again. If they do not come to a settlement, I shall give my ruling on the subject. Therefore, for the time being, the matter should rest there.

I remind the Hon'ble Members that in the list of Business for yesterday, debate on matters connected with the Electricity Board had to be taken up. When the Hon'ble Whip Sri Hutchmasthi Gowda pleaded that time should be extended, I stated that we should not skip over items on the agenda. Then there is the Motion on Scarcity Conditions also in the List of Business. The Hon'ble Members were persuading me and appealing to me that an opportunity should be given for discussion on scarcity conditions in the State. I request the Members to utilise the time available to the best advantage without deviating from the agenda.

As regards the motion pertaining to the Technical Data Committee Report on Cauvery waters, if both the sides come to an understanding, there is no difficulty in extending the current session. I am calling a meeting of the Business Advisory Committee and the matter may be taken up there. Now I think we may proceed with the regular agenda and stop further discussion on Sri Channabasappa's motion.

†ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಈ ಪ್ರಾಜೆಕ್ಟುಗಳನ್ನು ತಗೆದುಕೊಳ್ಳುವುದಕ್ಕೆ ತೊಂದರೆ ಹಣವ ಮುಗಟ್ಟು. ಆದ್ದರಿಂದ ಮಾಡವದಕ್ಕೆ ಆಗುತ್ತಾ ಇಲ್ಲ ಎಂದು ಹೇಳುತ್ತಾ ಇದ್ದಾರೆ. ಇದಕ್ಕೆ ನಮ್ಮ ಸಲಹೆ ಇಷ್ಟೆ. ಪಾನಿರೋಧವನ್ನು ತಗೆದು ಹಾಕಿದ್ದರಿಂದ ನುಮಾರು 10-12 ಕೋಟಿ ರೂಪಾಯಿ ಬಾನಿತ್ತದೆ ಎಂದು ತಿಳಿದುಕೊಂಡಿದ್ದೆವು. ಆದರೆ 20 ಕೋಟಿ ರೂಪಾಯಿ ಬರುತ್ತದೆ. ಎಂದರೆ ನುಮಾರು 8 ಕೋಟಿ ರೂಪಾಯಿ ಜಾಸ್ತಿ ಬಂದ ಹಾಗೆ ಆಯಿತು. ಆದುದರಿಂದ ತಾವು ಸಾಲವಾದರೂ ಮಾಡಿ ಈ ಕಾರ್ಯಗಳನ್ನೆಲ್ಲಾ ಮಾಡಬಹುದು ಏಕೆಂದರೆ 1974ನೇ ಇನವಿ ಆದಮೇಲೆ ಬೇಕಾದರೂ ಈ ಸಾಲಗಳನ್ನು ತೀರಿಸಬಹುದು. ಆದರೆ ಪ್ರಾಜೆಕ್ಟುಗಳನ್ನು ಮಾಡು

ವುದಕ್ಕೆ ಆಗುವುದಿಲ್ಲ. ತಮ್ಮ ಹತ್ತಿರ ದುಡ್ಡು ಇಲ್ಲವೇ ಇವ್ವರೆ ಸಂಬಂಧಪಟ್ಟವರೂ ಮಾತಿ, ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೊಡುವುದಕ್ಕೆ ತಯಾರಾಗಿದ್ದೇವೆ, ಈ ಕೆಲಸಗಳನ್ನು ಪೊಟ್ಟಮೊದಲು ಮಾಡಿಸಬೇಕು ಎಂದು ಸಲಹೆ ಮಾಡುತ್ತಾ ಇದ್ದೇನೆ.

2-30 P. M.

†Sri H. M. CHANNABASAPPA (Periyapatna).—There is a feeling in the Government that we are anxious to have a discussion. The purpost of having a discussion here is to strengthen the hands of the Governmene to take action and if the Government itself is prepared to take action on the lines already suggested, I for one, and I am sure all the Members of this House, will not press for a discussion. But the statement of the Chief Minister must be such as to not merely infuse confidence in us but also infuse confidence in the minds of all the people of the State by his immediate acton. A mere statement not followed up by action is not the thing we want. We want a categorical statement to be made by the Government on these lines: (1) the Goverement would take all action necessary to build up organisation, find funds and push through the projects well in time and complete the projects before 1974; (2) that this Government, in view of the fact that Madras has flouted the agreement, must say that we are not bound by that, nor are we bound by the clearance of the Central Government and we will go ahead whether we have clearance or not. ಈ ವಿಷಯಗಳನ್ನೆಲ್ಲಾ ಇಲ್ಲಿ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಎಲ್ಲಾ ಕಾರ್ಯಗಳನ್ನೂ ನರ್ಕಾರದವರು ಎಷ್ಟೇ ಖರ್ಚುಗಳು ಬರಲಿ 10 ಕೋಟಿ ಮೇಲೆ ಖರ್ಚಾದರೂ ಚಿಂತೆಯಿಲ್ಲ ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟರೆ ಅದಕ್ಕೂ ನಮ್ಮ ಅಡ್ಡಿಯಿಲ್ಲ. ಅವರು ಈ ಯೋಜನೆಗಳಿಗೆ ಬೇಕಾಗತಕ್ಕ ಹಣವನ್ನು ಬೆಗ್, ಬಾರೊ ಆರ್ ಸ್ವೀರ್ ಎಂದು ಹೇಳುವಂತೆ ಹೇಗಾದರೂ ಹಣವನ್ನು ಒದಗಿಸಿಕೊಳ್ಳಲಿ, ಅದಕ್ಕೂ ನಮ್ಮ ಅಡ್ಡಿಯಿಲ್ಲ. ನಮಗೆ ಮುಖ್ಯವಾಗಿ ಬೇಕಾದ್ದು ಒಂದು ಆಶ್ವಾಸನೆ. ಅದನ್ನು ನರ್ಕಾರದವರು ಕೊಡದೆ ಇಲ್ಲವ ತೊಂದರೆಯನ್ನೆಲ್ಲಾ ಅವರು ಆಹ್ವಾನ ಮಾಡಿ ಅದನ್ನು ತಮ್ಮ ತಲೆಯಮೇಲೆ ಎಳೆದುಕೊಳ್ಳುತ್ತೇವೆ ಎಂದರೆ ಅದಕ್ಕೂ ಅವರೇ ಜವಾಬ್ದಾರರು. ಅದೆಲ್ಲವನ್ನೂ ಚರ್ಚೆಮಾಡಲು ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎರೇಗೌಡ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಾವೇರಿ ನದಿಯ ನೀರನ್ನು ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ಮತ್ತು ಆ ನೀರನ್ನು ನಾವು 1974ರೊಳಗೇ ಆ ನಮ್ಮ ಹಕ್ಕಿನ ನೀರನ್ನೆಲ್ಲಾ ನಾವು ಉಪಯೋಗಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ಒಂದು ಸವಿಸ್ತಾರವಾದ ಚರ್ಚೆ ನಡೆಯಬೇಕೆಂದು ಒಂದು ಆಗ್ರಹಪೂರ್ವಕವಾದ ಬೇಡಿಕೆ ಬಂದುದರಿಂದ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಎಂಬುದು ತಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಅದರೂ ಇನ್ನೂ ಇದರ ಬಗ್ಗೆ ಒತ್ತಾಯಗಳು ಬರುತ್ತಲೇ ಇವೆ. ಇದೇ ರೀತಿಯಾಗಿ ಆ ಕೃಷ್ಣಾ ಮತ್ತು ಗೋದಾವರಿಯಲ್ಲ ನಮಗಿರತಕ್ಕ ಹಕ್ಕಿನ ನೀರನ್ನು ನಾವು 1974ರೊಳಗೆ ಉಪಯೋಗಮಾಡಿಕೊಳ್ಳಲು ಅದರ ಬಗ್ಗೆಯೂ ಜನರಿಂದ ಸಾಕಷ್ಟು ಒತ್ತಾಯಗಳು ಬರುತ್ತಿವೆ. ನಾನು ಇದೇ ಮಾನ್ಯ ಸಭೆಯಲ್ಲ ಅನೇಕವೇಳೆ ಹೇಳಿದ್ದೇನೆ. ಈ ದಿನವೂ ಕೂಡ ನಾನು ವೈಯಕ್ತಿವಾಗಿ ಹೇಳಬೇಕೆಂದರೆ ಎಲ್ಲ ವಿಷಯುಗಳಿಗಿಂತಲೂ ಒಂದು ಹೆಚ್ಚಿನ ಪ್ರಾಮುಖ್ಯತೆಯನ್ನು ಹಾಗೂ ಒಂದು ಹೆಚ್ಚಿನ ಪ್ರಾಶಸ್ತ್ಯವನ್ನು ಈ ವ್ಯವಸಾಯದ ಬಾಬಿಗೆ ಕೊಡಬೇಕೆಂದು ಮನಸ್ಸನ್ನು ಮಾಡಿಕೊಂಡಿದ್ದೇನೆ. ಈ ವಿಚಾರ ಅನೇಕ ಮಾನ್ಯ ಸದಸ್ಯರಿಗೂ ಬಹುಶಃ ಗೊತ್ತಿರಬಹುದು. ನಾವು ಮೊದಲು ಯಾವ ಒಂದು ದಾಮಾಷದಲ್ಲಿ ಈ ವ್ಯವಸಾಯದ ಬಾಬಿಗೆ ಹಣವನ್ನು ಖರ್ಚುಮಾಡುತ್ತಿದ್ದೆವೋ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಯೋಜನೆಗಳಿಗಾಗಿ ಹಣವನ್ನು ಖರ್ಚುಮಾಡರಾಗುತ್ತಿದೆ. ಆ ಕಾವೇರಿ ನದಿಯ ನೀರಿನಲ್ಲ ನಮ್ಮ ಪಾಲು ಎಷ್ಟಿದೆ ಮತ್ತು ಅದನ್ನು ಯಾವ ರೀತಿ ನಾವು ಉಪಯೋಗಮಾಡಿಕೊಳ್ಳಬೇಕು ಎನ್ನುವ ವಿಚಾರದಲ್ಲ ಇದೇ ಮಾನ್ಯ ಸಭೆಯಲ್ಲಿ ಬೇಕಾದಷ್ಟು ವೇಳೆ ಚರ್ಚೆಯಾಗಿದೆ. ಅದರ ಬಗ್ಗೆ ಇನ್ನೂ ಒಂದು ಹೆಚ್ಚಿನಮಟ್ಟದಲ್ಲಿ ಚರ್ಚೆಯಾಗಬೇಕೆಂದು ಸದಸ್ಯರು ಒತ್ತಾಯ ಮಾಡಿ

(ಶ್ರೀ ವೀರೇಂದ್ರ ಪಾಟೀಲ್)

ದ್ದಕ್ಕೆ ನಾನೂ ಕೂಡ ಅದನ್ನು ಒಪ್ಪಿಕೊಂಡು ಆ ಕಾವೇರಿ ಬೇಸಿನ್ನಿಗೆ ಸಂಬಂಧಪಟ್ಟ ಜನರನ್ನೆಲ್ಲಾ ಕರೆಸಿಕೊಂಡು ಅದನ್ನು ಚರ್ಚೆ ಮಾಡೋಣ ಎಂದು ಹೇಳಿದ್ದ ಪ್ರಕಾರ ಅದರ ಚರ್ಚೆಯಾಗಿದೆ. ಕಾವೇರಿ, ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುತಕ್ಕ ಬಗ್ಗೆ ಇತ್ತಕಡೆಯ ಸದಸ್ಯರು ಮತ್ತು ಅತ್ತಕಡೆಯ ಸದಸ್ಯರು ಎಲ್ಲರೂ ಮಾತನಾಡಿದ್ದಾರೆ. ಇದರಲ್ಲಿ ಯಾವ ರಾಜಕೀಯವೂ ಇಲ್ಲ. ಈ ನೀರನ್ನು ಸಂಪೂರ್ಣವಾಗಿ ಉಪಯೋಗಮಾಡಿಕೊಳ್ಳಬೇಕೆಂಬ ಹೊಣೆಗಾರಿಕೆ ಕೇವಲ ಸರ್ಕಾರದ್ದೇ ಅಲ್ಲ. ಅದರ ಹೊಣೆ ಈ ಮಾನ್ಯ ಸಭೆಯಮೇಲೂ ಇದೆ. ಈ ವಿಚಾರದಲ್ಲಿ ಎಲ್ಲಾ ಪಕ್ಷಗಳೂ ತಮ್ಮ ಪಾಲಿನ ಕರ್ತವ್ಯಗಳನ್ನು ಪಾಲಿಸಲೆಂಬ ಉದ್ದೇಶದಿಂದ ಈ ನದಿಗಳ ನೀರಿನ ಉಪಯೋಗದಲ್ಲಿ ಸರ್ಕಾರಕ್ಕೆ ತಗಲತಕ್ಕ ಪೆಟ್ಟಿದ ಬಗ್ಗೆ ಒಂದು ರಿಸೋರ್ಸಸ್ ಸಮಿತಿಯನ್ನೂ ಮಾಡಲಾಯಿತು. ರಿಸೋರ್ಸಸ್ ಕಮಿಟಿಯವರು ಇದೀಗ ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಿದಹಾಗೆ ಇಲ್ಲಿಯವರೆಗೂ ಕೂತು ಒಂದು ನಿರ್ಣಯಕ್ಕೆ ಬರುವುದಕ್ಕೆ ಸಾಧ್ಯವಾಗಲಲ್ಲ. ಫೈನಾನ್ಸ್ ಕಮಿಷನ್ನಿನಿಂದ ಅವಾರ್ಡ್ ಬರುವವರೆಗೂ ಇದನ್ನು ತಡೆಯೋಣವೆಂದು ನಿರ್ಣಯ ಮಾಡಿದ್ದರಿಂದ ಇಷ್ಟರವರೆಗೂ ಏನೂ ಕೆಲಸಮಾಡುವುದಕ್ಕಾಗಲಿಲ್ಲ. ಈಗ ಫೈನಾನ್ಸ್ ಕಮಿಷನ್ನಿನ ಅವಾರ್ಡ್ ಬಂದಿದೆ, ಈಗ ಹಣಕಾಸಿನ ಸ್ಥಿತಿಗತಿಯೇನು, ಫೈನಾನ್ಸ್ ಕಮಿಷನ್ನಿನಿಂದ ನಮಗೆ ಬಂದಂಥ ಅನುಕೂಲವೇನು, 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟರಮಟ್ಟಿಗೆ ಹಣ ಒದಗುತ್ತದೆ—ಈ ಎಲ್ಲಾ ಅಂಶಗಳೂ ಅವರ ಮುಂದಿವೆ. ಅದಕ್ಕಾಗಿ ಅವರಿಗೆ ಪ್ರತ್ಯೇಕವಾಗಿ ಭೇಟಿಯಾದಾಗಲೂ ಹೇಳಿದ್ದೇವೆ. ಆದ್ದರಿಂದ ರಿಸೋರ್ಸಸ್ ಕಮಿಟಿಯವರು ಅವರ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಿ ನಮಗೆ ವರದಿ ಸಲ್ಲಿಸಿದರೆ ನಾವು ಮುಂದಕ್ಕೆ ಹೋಗಬಹುದೆಂದು ಅವರಿಗೆ ಹೇಳಿದ್ದೇವೆ. ಇನ್ನು ವಿರೋಧಪಕ್ಷದ ನಾಯಕರಿಗೆ ಹೇಳುವುದಾದರೆ, ಕೇವಲ ಹಣಕಾಸಿನ ಮತ್ತು ಉಳಿದ ಶಕ್ತಿಗೆ ಯಾರಲ್ಲೂ ಪೊರೆ ಹೋಗಬೇಕಾಗಿಲ್ಲ. ಅದಕ್ಕಾಗಿ ಪದೇ ಪದೇ ನೀರಿನ ಪೂರ್ತಿ ಉಪಯೋಗ ಅಗ್ರಿಮೆಂಟ್ ಪೀರಿಯಡ್‌ನೊಳಗೆ ಮಾಡಿಕೊಳ್ಳುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೋ ಆ ಪ್ರಯತ್ನಗಳನ್ನು ಮಾಡುವುದರಲ್ಲಿ ತಾವೆಲ್ಲರೂ ಪೂರ್ತಿಯಾಗಿ ಸಹಕರಿಸಬೇಕೆಂದು ಹೇಳಿದ್ದೇವೆ. ಒಂದುವೇಳೆ ಇದಕ್ಕೆ ಹೆಚ್ಚಿನ ದುಡ್ಡು ಪ್ರತ್ಯೇಕವಾಗಿ ಶೇಖರಣೆ ಮಾಡುವ ಅಗತ್ಯ ಬಂದರೆ ಎರಡು ಕಾರ್ಪೊರೇಷನ್ನುಗಳನ್ನು ಮಾಡಬಹುದು. ನೀವೂ ಸಹ ಪರಿಶೀಲನೆಮಾಡಿ ಅದರ ಬಗ್ಗೆ ಶಿಫಾರಸು ಮಾಡಬೇಕು. ಕಾವೇರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ಕೃಷ್ಣಾ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಬೇಕು. ನಮ್ಮ ರಾಜ್ಯದೊಳಗೆ ಈ ಎರಡು ದೊಡ್ಡ ವ್ಯಾಲಿಗಳು ಇವೆ. ಇವತ್ತು ಬ್ಯಾಂಕ್ ನ್ಯಾಷನಲೈಜ್ ಆಗಿದೆ. ಅದರ ಮುಖಾಂತರ ಹೆಚ್ಚಿನ ಮಟ್ಟಿಗೆ ಅಡ್ವಾನ್ಸ್ ಪಡೆಯಬಹುದು. ಅಡ್ವಾನ್ಸ್ ಕಂಟ್ರಿಬ್ಯೂಷನ್ ಬಿಲ್ ತಯಾರುಮಾಡಿದ್ದಾರೆ. ನಿನ್ನೆ ಆ ಬಿಲ್ ಮುಂಡಿಸಿದ್ದಾರೆ. ಕೆಲವು ವಿಚಾರಗಳು ನನ್ನಲ್ಲಿವೆ. ಅವನ್ನು ರಿಸೋರ್ಸಸ್ ಕಮಿಟಿಯವರಲ್ಲಿ ವಿಚಾರಮಾಡಬೇಕಾಗಿದೆ. ಇಲ್ಲಿ ಅದು ಚರ್ಚೆಗೆ ಬಂದಾಗ್ಲೆ ಎಲ್ಲ ಪರಿಹಾರವನ್ನೂ ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಲ್ಲ. ಇದು ಈ ಮಾನ್ಯ ಸಭೆಯಲ್ಲಿ ಪದೇ ಪದೇ ಬರುತ್ತಾ ಇದೆ. ನಾನು ವಿಶ್ವಾಸದಿಂದ ಹೇಳುವುದಾದರೆ, ಇವತ್ತು ಯಾವ ಭಾಗದಲ್ಲಿಯೂ ಈ ಕಾವೇರಿ ಡೆವಲಪ್‌ಮೆಂಟ್ ನಿಲ್ಲಿಸಬೇಕು, ಇಲ್ಲಿ ನಿಲ್ಲಿಸಿ ಬೇರೆ ಕಡೆ ಮಾಡಬೇಕೆಂದು ಇಲ್ಲ. ನನಗೆ ಗೊತ್ತಿರುವಹಾಗೆ ಬಹು ದೊಡ್ಡ ಪ್ರಮಾಣದ ಕೆಲಸಗಳನ್ನು ಕಾವೇರಿ ಬೇಸಿನ್‌ನಲ್ಲಿ ಮಾಡಿದ್ದೇವೆ. ಹಾರಂಗಿ ಮಾಡುವುದು ಉಳಿದಿದೆ. ಅದನ್ನೂ ಹೇಳಿದ್ದೇವೆ. ಪೂರ್ತಿ ತಯಾರಾಗಿರತಕ್ಕ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ನಮ್ಮಲ್ಲಿ ಈಗ ಇರುವುದರಿಂದ ಮುಂದೆ ಹಜ್ಜೆ ಇಡುವ ಪರಿಸ್ಥಿತಿ ಇದೆ. ರಿಸೋರ್ಸಸ್ ಕಮಿಟಿಯವರ ಜೊತೆಯಲ್ಲಿ ನಾನೂ ಕೂಡ ಕೂತು ನನ್ನ ಸಲಹೆಗಳನ್ನು ಹೇಳುವುದಕ್ಕೆ ತಯಾರಿದ್ದೇನೆ. ನಾವು ರಚನಾತ್ಮಕವಾಗಿ ವಿಚಾರಮಾಡಿ ಒಂದು ಹಾದಿ ಹುಡುಕಬೇಕು. ಅದಕ್ಕಾಗಿ ನಾವು ಏನು ಸ್ಟೇಟ್‌ಮೆಂಟ್ ಮಾಡುತ್ತೇವೋ ಅದರಲ್ಲಿ ಫಾರೆ ಆ್ಯಕ್ಷನ್ ಇಲ್ಲದೇಹೋದರೆ ಏನೂ ಪ್ರಯೋಜನವಿಲ್ಲ. ಯಾರೂ ಶೂರನಂತೆ ಇಲ್ಲಿ ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಬೇಕೆಂಬ ವಿಚಾರವಲ್ಲ. ಮಾತು ಹೆಚ್ಚು ಆಡಲಾರದೆ ಕೃತಿಯಲ್ಲಿ ಅದನ್ನು ಮಾಡಿ ತೋರಿಸಬೇಕೆಂಬ ಮನೋಭಾವನೆಯನ್ನು ನಾವೆಲ್ಲರೂ ತಾಳಬೇಕು. ಇದರಲ್ಲಿ ನಿಮಗೆ ಎಷ್ಟು ಆತುರತೆ ಇದೆಯೋ ನಮಗೂ ಅಷ್ಟೇ ಆತುರತೆ ಇದೆ. ಆದ್ದರಿಂದ ಎಲ್ಲಾ ಕೆಲಸಕಾರ್ಯಗಳನ್ನು ಮಾಡಬೇಕೆಂಬ ಮನಸ್ಸು ಮಾಡಿದ್ದೇವೆ. ಅದಕ್ಕೆ ಒಂದು ಹಾದಿಯನ್ನು ಹುಡುಕಿದ್ದೇವೆ. 20ನೇ ತಾರೀಖು ರಿಸೋರ್ಸಸ್ ಕಮಿಟಿ ಸೇರುತ್ತದೆ. ಅವರ ಜೊತೆಯಲ್ಲಿ ನಾನೂ ಸೇರಿ ಒಂದು ಹಾದಿ ಹುಡುಕಿದರೆ ಆಗ ಆ ಕೆಲಸಕಾರ್ಯಗಳು ತ್ವರಿತಗತಿಯಿಂದ ಪ್ರಾರಂಭ ಮಾಡುವುದಕ್ಕೆ ಮತ್ತು ಪ್ರೋಗ್ರೆಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನನಗನ್ನಿಸುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡು

ತ್ತೇನೆ. ಈ ಒಂದು ಸಮಸ್ಯೆ ರಾಜಕೀಯ ಸಮಸ್ಯೆಯಲ್ಲ. ಏನೋ ಮಾಡಿದರು, ಎಲ್ಲೋ ಮಾಡಿದರು ಎಂಬುದಾಗಿ ಹೇಳುವುದು ಸರಿಯಾದ ನಲಹೆಯಲ್ಲ. ಯಾವ್ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಸೇವಿಂಗ್ಸ್ ಮಾಡುವುದಕ್ಕೆ ಸಾಧ್ಯವಿದೆ. ಯಾವ್ಯಾವ ಯೋಜನೆಗಳನ್ನು ಮುಂದೂಡುವುದಕ್ಕೆ ಸಾಧ್ಯವಿದೆ, ರಿಸೋರ್ಸನ್ನು ಪೊಬಿಲೈಜ್ ಮಾಡುವುದಕ್ಕೆ ಸಾಧ್ಯವಿದೆ; ಇವುಗಳಿಂದ ಎಷ್ಟು ದುಡ್ಡು ಬರುತ್ತದೆ—ಇವೆಲ್ಲವನ್ನೂ ನೋಡಿಕೊಂಡು ಅಷ್ಟು ಹಣವನ್ನೂ ನೀರಾವರಿಗೋಸ್ಕರವೇ ಇಡೋಣ. ಇನ್ನೂ ಹೆಚ್ಚು ದುಡ್ಡು ಬೇಕಾದರೆ ಡಿಬೆಂಚರ್ ಲೋನ್ ಅಥವಾ ಬ್ಯಾಂಕುಗಳಿಂದ ಪಡೆಯೋಣ. ಇನ್ನೂ ಇಂತಹ ಅನೇಕ ನಲಹೆಗಳು ಇವೆ. ಇವೆಲ್ಲವನ್ನೂ ನಾವು ರಿಸೋರ್ಸಸ್ ಕಮಿಟಿಯಲ್ಲಿ ಕೂತು ದೀರ್ಘವಾಗಿ ವಿಚಾರ ಮಾಡೋಣ. ಅದರ ಬಗ್ಗೆ ನನಗೆ ಗೊತ್ತಿರುವ ಹಾಗೆ ನಾನು ಆಶಾವಾದಿ ಇದ್ದೇನೆ.

ಕಾವೇರಿ ಬೇಸಿನ್ನಿನಲ್ಲಿರತಕ್ಕ ಅನೇಕ ಕೆಲಸಕಾರ್ಯಗಳನ್ನು ತ್ವರಿತಗತಿಯಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಂತಹ ಪೂರ್ವಸಿದ್ಧತೆಗಳನ್ನು ಈಗಾಗಲೇ ಮಾಡಿದ್ದೇವೆ. ರಿಸೋರ್ಸಸ್ ಕಮಿಟಿಯವರು ಯೋಗ್ಯವಾದ ನಲಹೆಗಳನ್ನು ಕೊಟ್ಟಿದ್ದಾರೆ. ನಮಗೆ ಇದರಿಂದ ಹೆಚ್ಚಿನ ಅನುಕೂಲವಾಗಬಹುದು, ಹೆಚ್ಚಿನ ನೀರಾವರಿ ಅನುಕೂಲ ಒದಗಬಹುದು ಎಂಬ ಆಶೆಯನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟ ಅನೇಕ ವಿಚಾರಗಳನ್ನು ಇಲ್ಲಿ ಹೇಳುವುದಿಲ್ಲ, ಅದು ಹೇಳುವ ಅವಶ್ಯಕತೆಯೂ ಇಲ್ಲ. ಅದಕ್ಕಾಗಿ ಇನ್ನೊಮ್ಮೆ ಸ್ಪಷ್ಟವಾಗಿ ಹೇಳುತ್ತೇನೆ. ಅವರಿಗೆ ಎಷ್ಟು ಆತುರತೆ ಇದೆಯೋ ಅಷ್ಟೇ ಆತುರತೆ ನಮಗೆಲ್ಲರಿಗೂ ಇವೆ. ನಾವೆಲ್ಲರೂ ಮತ್ತು ರಿಸೋರ್ಸಸ್ ಕಮಿಟಿಯವರೂ ಕೂತುಕೊಂಡು, ಇದಕ್ಕೆ ಒಂದು ಹಾಸು ಹುಡುಕಿ ಎಲ್ಲವನ್ನೂ ತ್ವರಿತಗತಿಯಿಂದ ಮುಗಿಸುವುದಕ್ಕೆ ಪ್ರಯತ್ನ ಮಾಡೋಣ. ಆ ಒಂದು ಪ್ರಯತ್ನ ಮಾಡುವುದರಲ್ಲಿ ನಾನು ಪೂರ್ತಿಯಾಗಿ ನನ್ನ ಶಕ್ತಿಮೀರಿ ಪ್ರಯತ್ನವನ್ನು ಮಾಡುತ್ತೇನೆಂದು ತಮಗೆ ಭರವಸೆಯನ್ನು ನೀಡುತ್ತೇನೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ತಾವು ರಿಸೋರ್ಸಸ್ ಕಮಿಟಿಯವರು ಹೇಳಿದ ಮೇಲೆ ಎಂದು ಹೇಳಿದ್ದೀರಿ. ಅದು ನಮಗೂ ಕೂಡ ಸ್ವಲ್ಪ ಗೊತ್ತಾಗುತ್ತಿದೆ. ಅಲ್ಲಿ ಆಗಲಿ, ಆಗದಿರಲಿ, ಇದನ್ನು ಮಾಡಿಯೇ ಮಾಡುತ್ತೇವೆಂದು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ರಿಸೋರ್ಸಸ್ ಕಮಿಟಿ ನಾವು ನೀವು ಮಾಡಿದ್ದೇವೆ. ನಾನು ಅವರ ಜೊತೆಯಲ್ಲಿ ಕೂತು ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇನೆ. ನಿಮ್ಮ ಸಲಹೆ ನಮ್ಮ ಸಲಹೆ, ಎಲ್ಲವನ್ನೂ ನೋಡಿಕೊಂಡು ಮಾಡೋಣ. ನಾವೇ ಆ ಕಮಿಟಿಯಲ್ಲಿ ಇರುವುದರಿಂದ ನಮ್ಮ ಬಗ್ಗೆ ನಾವೇ ಸಂಶಯಪಟ್ಟುಕೊಂಡರೆ ಹೇಗೆ ಆಗುತ್ತದೆ ?

ಶ್ರೀ ಎಸ್. ಚನ್ನಯ್ಯ.—ಅದೇನೇ ಆಗಲಿ, ಪ್ರಾರಂಭ ಮಾಡಿಯೇ ಮಾಡಬೇಕೆಂದು ಕೈ ಮುಗಿದು ಬೇಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ರಿಸೋರ್ಸಸ್ ಕಮಿಟಿ ಮಾಡಬೇಕೆಂದು ತಾವೇ ನಲಹೆ ಮಾಡಿದ್ದೀರಿ. ಇದರಿಂದ ನಮಗೆ ಎಷ್ಟು ಹಣ ಉಳಿಸುವುದಕ್ಕೆ ಸಾಧ್ಯವಿದೆ, ಯಾವ ಬಾಬಿನಲ್ಲಿ ಶೇಖರಣೆ ಮಾಡಬಹುದು, ಇವೆಲ್ಲವನ್ನು ನಲಹೆಗಳ ಮೂಲಕ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಆಗ ನನಗೆ ಒಂದು ಥಿಯರ್ಯ ಬಂತು. ಅದರಮೇಲೆ ಪ್ಲಾನ್ಸ್, ಬ್ಲೂಪ್ರಿಂಟ್ಸ್ ಎಲ್ಲಾ ಮಾಡಿದ್ದಾರೆ. ಆದರೂ ಕೂಡ ಮಾಡುತ್ತೇವೆಂದು ಹೇಳಬಹುದಾಗಿದ್ದರೆ, ಇವತ್ತು ಆ ರೀತಿ ಹೇಳಬೇಕಾಗಿದ್ದಿರಲಿಲ್ಲ. ಇವತ್ತು ಆ ರೀತಿ ಹೇಳಿದರೆ, ರಿಸೋರ್ಸಸ್ ಕಮಿಟಿ ಕೂಡುವ ಅಗತ್ಯವಿಲ್ಲವೆಂದು ಹೇಳಿದರೆ ಹೇಗೆ ? ನಾವು ಆಶಾವಾದಿಗಳಾಗಿದ್ದೇವೆ. ರಿಸೋರ್ಸಸ್ ಕಮಿಟಿಯಲ್ಲಿ ಚರ್ಚೆ ಮಾಡಿ, ಆಮೇಲೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಈ ತಿಂಗಳ ಕೊನೆಯೊಳಗೆ ಒಂದು ನಿರ್ಣಯಕ್ಕೆ ಬರಬಹುದೆಂದು ಕಾಣುತ್ತದೆ. ಆಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ರಿಸೋರ್ಸಸ್ ಕಮಿಟಿಯವರು ಹೇಳಿದ್ದನ್ನು ಇವರು ಕ್ಯಾಬಿನೆಟ್ ಸದಸ್ಯರಿಗೆ ಒಪ್ಪಿಸುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ರಿಸೋರ್ಸಸ್ ಕಮಿಟಿಯವರು ಈಗಾಗಲೇ 10 ಕೋಟಿ ರೂಪಾಯಿ ಲಾಟ್ ಮಾಡಿ ಎಂದು ಹೇಳಿದ್ದಾರೆ. ತಮ್ಮ ಆರ್ಥಿಕ ಮಂತ್ರಿಯವರೂ ಒಪ್ಪಿಕೊಂಡಿದ್ದಾರೆ. ಈಗ ಅವರಿಗೆ ಇವರಿಗೆ ಕಾಯುತ್ತಾ ಕೂರುವುದಕ್ಕೆ ಸಮಯವಿಲ್ಲ. ಈ ವಿಷಯ ಏನಿದೆ, ಇದಕ್ಕೆ ಯಾರನ್ನಾದರೂ ಕಾಯುತ್ತಾ ಕೂತರೆ ಸಮಯ ನಮಗೋಸ್ಕರ ಕಾಯುವುದಿಲ್ಲ. ನಷ್ಟವನ್ನು ಯಾರೂ ತುಂಬುವುದಕ್ಕಾಗುವುದಿಲ್ಲ. ರಿಸೋರ್ಸಸ್ ಕಮಿಟಿಯವರು ಹೇಳಿದರೆ ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದಿಲ್ಲ ಎಂಬ ಥೋರಣಿಯನ್ನು ತಳಿಬಾರದು. ಮಾಡುತ್ತೇವೆಂದು ಹೇಳಬೇಕು. ರಿಸೋರ್ಸಸ್ ಕಮಿಟಿಯವರು ಅದಕ್ಕೆ ಏಡ್ ಮಾಡಬೇಕು. ಆಮೇಲೆ ಈ ಸಮಸ್ಯೆಗಳು ಇನ್ನೂ ಇತರ ಅನೇಕ ಸಮಸ್ಯೆಗಳಿಗೆ ಕಾರಣವಾಗಿ ದೇಶದಲ್ಲಿ ಅನಾಹುತವಾಗುವುದಕ್ಕೆ ಕಾರಣವಾಗುತ್ತದೆ.

Mr. SPEAKER.—I request the hon Member not to disclose the discussions that took place in the committee.

Sri H. M. CHANNABASAPPA.—Sir, I want a clarification. The Hon'ble Chief Minister was pleased to say that he is second to none in this matter. I agree and I am very happy about it, but I am unable to understand and this House is also unable to understand why he should not straightaway make the allotment necessary for pushing through the projects immediately so that the projects may go ahead and in the meantime we may sit together and discuss and find out the resources. Only yesterday we voted several crores of rupees by way of Supplementary Grants. This House has given an assurance that we are going to stand by him. So, in view of the shortage of time that is available to us. the projects may be proceeded with without any hindrance whatsover. I appealed to him yesterday to make available Rs. 5 crores ask his engineers to go ahead with all the projects and come before us for additional grants, and we will be prepared to give it. In the meantime the Resources Committee may go ahead with discussing with you and with all the Ministers to find out the necessary resources for it.

Sri VEERENDRA PATIL.—Sir, I have explained all the facts of the case. The hon. Member expects that the Chief Minister should announce that he is going to allot Rs. 5 or 10 crores and then ask the Chief Engineer to go ahead with the projects. It does not take much time to ask my officers to go ahead with the projects. I can do it within twenty-four hours. Now the question is how and from where Rs. 5 or 10 crores are to come. I have to get at least 50 per cent of this amount from out of savings and the remaining 50 per cent by mobilising additional resources. For that I have to find out which are the programme to which the Departments have already committed. I do not know to what extent it will be possible for us to cut short their programmes and make any savings. This is possible only if we sit with those Ministers, discuss with the Secretaries and Heads of Departments and find out how much we can save in each department. That is why I have been urging the members of the Resources Committee to sit with all the Ministers, Secretaries and Heads of Departments and discuss and find out to what extent they can save and also find out to what extent they can further mobilise resources. After that, we can come to a decision. Then it will not take much time to make an announcement and give effect to the decison that we may take.

ಶ್ರೀ ಎಸ್. ಶಿವಪ್ಪ.—ಈಗ ಸರ್ಕಾರದವರು ಏನು ಹೇಳಬೇಕು ಎಂದರೆ ನಾವು ಆ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಮನಸ್ಸು ಮಾಡಿದ್ದೇವೆ, ಕಾರ್ಯಗತ ಮಾಡಿಯೇ ಮಾಡುತ್ತೇವೆ ಎನ್ನುವ ಅಂಶ ಮೊದಲು ನಿರ್ಧಾರ ಆಗಬೇಕು. ಅದನ್ನು ನಿರ್ಧಾರ ಮಾಡಿದಮೇಲೆ ಅದಕ್ಕೆ ಹಣ ಎಲ್ಲಿಂದ ಬರಬೇಕು, ಹೇಗೆ ಒದಗಿಸಬೇಕು ಎಂಬುದು ಎರಡನೆಯ ಪ್ರಶ್ನೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಕಾರ್ಯಗತ ಮಾಡಿಯೇ ಮಾಡುತ್ತೇವೆ ಎನ್ನುವಂಥಾದ್ದನ್ನು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಆ ಕೆಲಸ ಮಾಡುವುದಕ್ಕೆ ನಾವು ತಯಾರು ಮಾಡಿಕೊಂಡಿದ್ದೇವೆಂದು ನಾನು ಇಷ್ಟರವರೆಗೆ ಹೇಳಿದ್ದೇನೆ. ಹಣದ ವ್ಯವಸ್ಥೆಗೆ ತಾವುಗಳೆಲ್ಲರೂ ಸಹಕರಿಸಬೇಕು

ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಹಣ ಕೊಟ್ಟಾಗ ಅದನ್ನು ನಾನು ವಿಚಾರ ಮಾಡುತ್ತೇನೆ ಎಂದು ನಾನು ಹೇಳಲಿಲ್ಲ.

I have got the blue-prints ready and it will not take any time to issue order to the engineers.

Mr. SPEAKER.—I am happy that there is no difference of opinion on this matter. I invite all these hon. Members to come to my chamber. Let us have an informal talk in my chamber at 3-15 P.M. when the Chief Minister will also join us. Let all the hon. Members put their heads together and find out a solution. Nobody will be happier than myself if an agreed solution is arrived at.

General Discussion on the Annual Financial Statement of the Mysore State Electricity Board for 1968-69.

†ಶ್ರೀ ಎನ್. ಚೆಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಪತಿಗಳೇ, ನೆನ್ನೆ ದಿವಸ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ವಿದ್ಯುಚ್ಛಕ್ತಿ ಮಂಡಲಿಯ 1968-69 ಮತ್ತು 19 9-70ನೇ ಸಾಲಿನ ಬಜೆಟ್ಟಿನ ಬಗ್ಗೆ ಇರುವ ಅನೇಕ ನ್ಯೂನತೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದೇನೆ. ಈ ನ್ಯೂನತೆಗಳ ಬಗ್ಗೆ ಇನ್ನೂ ಅನೇಕ ವಿಷಯಗಳನ್ನು ಮತ್ತೆ ನಾನು ಹೇಳಬೇಕಾಗಿತ್ತು. ಈ ನ್ಯೂನತೆಗಳಿಂದ ಎಷ್ಟೊಂದು ಹಣ ಹಾಳಾಗುತ್ತಿವೆ ಎಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಈಗ ನೀರಾವರಿ ಪಂಪ್‌ಸೆಟ್ಟುಗಳ ಮೇಲಿನ ದರವನ್ನು ಹೆಚ್ಚು ಮಾಡಿದ್ದಾರೆ. ವಿದ್ಯುಚ್ಛಕ್ತಿ ಮಂಡಲಿಯವರು ಏನು ಒಂದು ಅಂಕಿಅಂಶಗಳನ್ನು ಸರ್ಕಾರದ ಮುಂದೆ ಮತ್ತು ಸಾರ್ವಜನಿಕರ ಮುಂದೆ ಮತ್ತು ಬಳಕೆದಾರರ ಮುಂದೆ ಇಟ್ಟಿದ್ದಾರೆಯೋ ಅದು ಬಹಳ ಉತ್ಪ್ರೇಕ್ಷೆಯಿಂದ ಕೂಡಿದೆ ಎಂದು ಹೇಳುತ್ತೇನೆ. ಈಗ ಒಂದು ಬಾವಿಯ ಹತ್ತಿರಕ್ಕೆ ಲೈನ್ ಎಳೆಯುಬೇಕಾದರೆ ಸರಾಸರಿ 3 ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಮಂಡಲಿಯವರು ಹೇಳಿದ್ದಾರೆ. ಈ ಬಗ್ಗೆ ಅನೇಕ ವಾದ ವಿವಾದಗಳು ಇವೆ. ಇವತ್ತಿನ ದಿವಸ ಮಂಡಲಿಯವರು ಬಳಕೆದಾರರ ಅನುಕೂಲಕ್ಕಾಗಿ 3 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಲೈನ್ ಎಳೆದರೂ ಕೂಡ ಆ ಒಂದು ಸ್ವತ್ತು ಮಂಡಲಿಯವರದ್ದೇ ಆಗಿರುತ್ತದೆ. ಯಾರ ಅನುಕೂಲಕ್ಕಾಗಿ ಲೈನ್ ಎಳೆಯುತ್ತಾರೋ, ಅವರದ್ದೇ ಸ್ವತ್ತು ಎಂದು ಮಂಡಲಿಯವರು ಹೇಳಿದರೆ ದರ ಹೆಚ್ಚು ಮಾಡಿದ್ದನ್ನು ಒಪ್ಪಿಕೊಳ್ಳಬಹುದಾಗಿತ್ತು. ಈಗ ಒಂದು ಭಾಗಕ್ಕೆ ಲೈನ್ ಎಳೆಯಬೇಕಾದರೆ ಒಂದು ಸರ್ವೇಟ್ ಎಸ್ಟಿಮೇಟ್ ತಯಾರು ಮಾಡುತ್ತಾರೆ. ಆ ಭಾಗಕ್ಕೆ ಬೇಕಾಗುವ ಸಾಮಾನುಗಳಿಗೆ ಮತ್ತು ಲೇಬರರ್ಸ್ ಬಗ್ಗೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಲೆಕ್ಕ ಹಾಕುತ್ತಾರೆ. ಲೇಬರರ್ಸ್ ಬಗ್ಗೆ ಮಂಡಲಿಯವರು ಖರ್ಚು ಮಾಡುವ ಹಣದಲ್ಲಿ ಬಹಳಷ್ಟು ಹಣವನ್ನು ಉಳಿಸಬಹುದು. ಈಗ ಒಂದು ಪೋಲನ್ನು ನೆಡಬೇಕಾದರೆ ಆ ಪೋಲನ್ನು ಗಾಡಿಯಲ್ಲಿ ಹಾಕಿಕೊಂಡು ಅದರ ಹಿಂದೆ ಸ್ಮಶಾನ ಯಾತ್ರೆಗೆ ಹೋಗುವಂತೆ 20-30 ಜನ ಅವರದ್ದೇ ಫೋಷಣೆಗಳನ್ನು ಕೂಗಿಕೊಂಡು ಹೋಗುತ್ತಾರೆ. ನಾಲ್ಕು ಜನ ಮಾಡುವ ಕೆಲಸವನ್ನು 20-30 ಜನ ಮಾಡುತ್ತಾರೆ. ಇಷ್ಟೊಂದು ಜನ ಲೈನ್‌ಮನ್‌ಗಳು ಇದ್ದರೂ ಕೂಡ, ಪ್ಯೂಜ್ ಹೋಗಿದೆ, ಬಂದು ಹಾಕಿಕೊಡಿ ಎಂದುಕೇಳಿದರೆ ಲೈನ್ ಮೆನ್‌ಗಳು ಇಲ್ಲ ಎಂದು ಆಫೀಸ್‌ನವರು ಹೇಳುತ್ತಾರೆ. ಇಲ್ಲ ಹಣ ಹೇಗೆ ಪೋಲಾಗುತ್ತಿದೆ ಎನ್ನುವುದಕ್ಕಾಗಿ ಇಂತಹ ಒಂದು ಉದಾಹರಣೆ ಹೇಳಿದೆ. ಇಲ್ಲಿರುವ ಜನರೇ ಬೋರ್ಡಿಗೆ ಸೇರಿದ ಸಾಮಾನುಗಳನ್ನು ಕದ್ದು ಹೊರಗಡೆ ಮಾರಾಟ ಮಾಡುತ್ತಿರುವುದು ಎಲ್ಲರಿಗೂ ಗೊತ್ತಾಗಿದೆ. ಇದರಲ್ಲಿ ಕಾಪರ್ ವೈರ್ ಕಳ್ಳತನ ಬಹಳ ಜಾಸ್ತಿಯಾಗಿತ್ತು ಎಂದು ಕೇಳಿದ್ದೇವೆ. ಇದಕ್ಕೆ ಕಾರಣ ಇಲ್ಲಿರುವ ಲೈನ್‌ಮನ್‌ಗಳು ಹಾಗೂ ಇನ್ನಿತರರು ಸೇರಿಕೊಂಡು ಬೇಕಾದಷ್ಟು ಹಣವನ್ನು ಪೋಲು ಮಾಡುತ್ತಿದ್ದಾರೆ ಮತ್ತು ಬೆರೆ ಬಾಳುವ ಸಾಮಾನುಗಳನ್ನು ಮಾರಿ ಹಣ ಸಂಪಾದನೆ ಮಾಡುತ್ತಿದ್ದಾರೆ. ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿಗೆ ಸೇರಿರುವ ಜನರೇ ಇವನ್ನೆಲ್ಲಾ ಮಾಡುತ್ತಿದ್ದರೂ ಇದರ ಕಡೆಗೆ ಸರಿಯಾದ ಬಿಗಿ ಇಟ್ಟು ತನಿಖೆ ಮಾಡುತ್ತಿಲ್ಲ. ಇಡೀ ಸಂಟ್ರೂರ್ ಸ್ಟೋರು ಕೈಕೆಳಗೆ ಇರುವ ಲೈನ್‌ಮೆನ್‌ಗಳು ಹಾಗೂ ಇನ್ನಿತರ ಜನರು ಖದೀಮರಾಗಿದ್ದಾರೆ. ಇವರಿಂದಲೇ ಬೋರ್ಡಿಗೆ ವಿಪರೀತವಾದ ನಷ್ಟವಾಗುತ್ತಿದೆ. ಅಲ್ಲದೆ ಇಲ್ಲಿ ಆಗಾಗ್ಗೆ